ಅರ್ಧ ವಾರ್ಷಿಕ ಕಂತುಗಳಲ್ಲಿ ತಿಂಗಳಿಗೆ ಶೇ.0.5ರಷ್ಟು ಬಡ್ಡಿಯೊಡನೆ ಪಾವತಿಸಲು ಅವಕಾಶ.

4) ಮಾರಾಟ ತೆರಿಗೆ ಬಾಕಿಯನ್ನು ಅರ್ಧವಾರ್ಷಿಕ ಕಂತುಗಳಲ್ಲಿ ತಿಂಗಳಿಗೆ ಶೇ.0.5ರಷ್ಟು ಬಡ್ಡಿಯೊಡನೆ ಪಾವತಿಸಲು ಅವಕಾಶ.

5) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಘಟಕವು ಮುಚ್ಚಿದ ಅವಧಿಗೆ ಬಾಕಿಯಿರುವ ಮೊತ್ತದ ಮೇಲೆ ಬಡ್ಡಿ ಲೆಕ್ಕ ಹಾಕುವಂತಿಲ್ಲ.

6) ಘಟಕವು ಬಾಕಿಯಿರುವ ತೆರಿಗೆ ಪಾವತಿಯನ್ನು ಬಡ್ಡಿಯಿಲ್ಲದೆ 3 ವರ್ಷಗಳ ಕಾಲ ಮುಂದೂಡುವುದು.

ಈ) ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಸರ್ಕಾರದಿಂದ ಹೊಸ ಕೈಗಾರಿಕಾ ನೀತಿಯಲ್ಲಿ ಕೈಗಾರಿಕೆಗಳ ಬೆಳವಣಿಗೆಗಾಗಿ ಅನೇಕ ರಿಯಾಯ್ತಿ ಹಾಗೂ ಸವಲತ್ತುಗಳನ್ನು ಘೋಷಿಸಲಾಗಿದೆ. ಅದರಂತೆ ಕೈಗಾರಿಕಾ ವಲಯಗಳನ್ನು ಪುನರ್ ವಿಂಗಡನೆ ಮಾಡಲಾಗಿದೆ. ತಾಂತ್ರಿಕ ಉನ್ನತೀಕರಣಕ್ಕೆ ಉತ್ತೇಜನ ನೀಡಲಾಗಿದೆ. ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳಿಗೆ ಗುಣಮಟ್ಟ ಉನ್ನತೀಕರಣಕ್ಕೆ ಒತ್ತು ನೀಡಲಾಗಿದೆ. ರೋಗಗ್ರಸ್ತ ಕೈಗಾರಿಕೆಗಳಿಗೆ ಪುನಶ್ಚೇತನಕ್ಕಾಗಿ ನೀಡಲಾಗುವ ಸೌಲಭ್ಯಗಳನ್ನು ಸೇರಿಸಲಾಗಿದೆ. ಮೂಲಭೂತ ಸೌಕರ್ಯಗಳನ್ನು ನೀಡುವ ಬಗ್ಗೆ ಒತ್ತು ನೀಡಲಾಗಿದೆ.

ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ವಿಠಲಾಪುರ ಬಂಡೆಯಲ್ಲಿ ಅಕ್ರಮಗಣಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 415(641)

ಸದಸ್ಯರ ಹೆಸರು: ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ)

ಉತ್ತರಿಸುವವರು: ಶ್ರೀ ವಿ.ಮುನಿಯಪ್ಪ(ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಪ್ರಶ್ನೆ

ಅ. ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ ವಿಠಲಾಪುರ ಗ್ರಾಮದ ಬಳಿ ಇರುವ ಭಾರಿ ಬೆಲೆ ಬಾಳುವ ಗಣಿಯನ್ನು ಅಕ್ರಮವಾಗಿ ನಡೆಸುತ್ತಿರುವುದು ಸರ್ಕಾರಕ್ಕೆ

ತಿಳಿದಿರುವುದೇ?

ಆ. ಈ ಪ್ರದೇಶದಲ್ಲಿ ಹಾಲಿ ಎಷ್ಟು ಎಕರೆಯ ಗಣಿ ಇದೆ?

ಇ. ಸರ್ಕಾರ ಹರಾಜು ಮುಖಾಂತರ ಈ ಗಣಿಯನ್ನು ಕೊಡಲು ಸಾಧ್ಯವೇ?

ಈ. ಈಗೇನಾದರೂ ಹರಾಜು ಮಾಡಲಾಗಿದೆಯೇ? ಅಥವಾ ಟೆಂಡರ್ ಕರೆಯಲಾಗಿದೆಯೇ?

ಉ. ಇದಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲಾಗಿದೆಯೇ? (ಹಾಗಿದ್ದಲ್ಲಿ, ಅರ್ಜಿದಾರರ ಪೂರ್ಣ ವಿವರ ನೀಡುವುದು)

ಊ. ಎಂ.ಎಂ.ಎಲ್. ಸಂಸ್ಥೆ ಇದರಲ್ಲಿ ಭಾಗವಹಿಸಿರುವುದೇ? ಮತ್ತು ಸರ್ಕಾರ ಯಾರಿಗಾದರೂ ಪರವಾನಗಿ ಕೊಟ್ಟಿರುವುದೇ? (ವಿವರ ಕೊಡುವುದು)

ಉತ್ತರ

ಅ. ಇಲ್ಲ.

ಆ. ಈ ಪ್ರದೇಶದಲ್ಲಿ ಹಾಲಿ 5-00 ಎಕರೆಗಳಿಗೆ ಕಲ್ಲು ಗಣಿ ಗುತ್ತಿಗೆ ಇರುತ್ತದೆ.

ಇ. ಹರಾಜು ಮಾಡಲು ಸಾಧ್ಯವಿರುವುದಿಲ್ಲ.

ಈ. ಇಲ್ಲ.

ಉ. ಇಲ್ಲ.

ಊ. ಹರಾಜು ಮಾಡದೇ ಇರುವುದರಿಂದ ಮೆ: ಮೈಸೂರು ಮಿನರಲ್ಸ್ ಸಂಸ್ಥೆಯವರು ಭಾಗವಹಿಸಿರುವುದಿಲ್ಲ. ಹಾಗೂ ಮೆ: ಪರಿಮಳ ಗ್ರಾನೈಟ್ಸ್‌ರವರಿಗೆ ಮಾನ್ಯ ಉಚ್ಚ ನ್ಯಾಯಾಲಯವು ಮೇಲ್ಮನವಿ ಸಂಖ್ಯೆ : 6879:99ರಲ್ಲಿ ಮಧ್ಯಂತರ ಆದೇಶ ನೀಡಿರುವುದರಿಂದ 5-00 ಎಕರೆ ಪ್ರದೇಶಕ್ಕೆ ಕಲ್ಲು ಗಣಿ ಗುತ್ತಿಗೆ ನೀಡಲಾಗಿದೆ.

ಹಾಸ್ಟೆಲ್ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 416(642)